## ಕುಂದುಕೊರತೆಯೂ ಜಾಹೀರಾಗಲಿ

ಝೀ ಕನ್ನಡದಲ್ಲಿ ಧಾರಾವಾಹಿಗಳ ಮಧ್ಯದಲ್ಲಿ ವಾಹನಗಳ ದಟ್ಟಣೆಯಲ್ಲಿ ಜಾಹೀರಾತಿನ ತುಣುಕನ್ನು ಪ್ರಸಾರ ಮಾಡುತ್ತಾರೆ. ಇದರಲ್ಲಿ ಒಂದು ಬದಲಾವಣೆ ಮಾಡಿ ಎಲ್ಲೆಲ್ಲಿ ರಸ್ತೆಗಳು ಹಾಳಾಗಿವೆ, ಬೀದಿ ದೀಪಗಳಿಲ್ಲ, ಎಲ್ಲೆಲ್ಲಿ ರಸ್ತೆ ಕಾಮಗಾರಿ ನಿಲ್ಲಿಸಿ ಜನರಿಗೆ ತೊಂದರೆಯಾಗುತ್ತಿದೆ, ಕಸದ ರಾಶಿ ಸಮಸ್ಯೆ ಇವುಗಳ ಪ್ರಸಾರ ಮಾಡಿದರೆ ನಮ್ಮ ಸಮಸ್ಯೆಗೂ ಪ್ರಸಾರ ಸಿಗುವ ಸಾಧ್ಯತೆ ಇದೆ ಎಂದೆನಿಸುತ್ತದೆ.

—ಶಾಂತಕುಮಾರ್, ಸರ್ಜಾಪುರ

## ನಾಗೇಶ್ ನಿರೀಕ್ಷೆಯಲ್ಲಿ...



ಚಂದನದ 'ವಾರದ ವ್ಯಕ್ತಿ' ಕಾರ್ಯಕ್ರಮದಲ್ಲಿ ಟೆನ್ನಿಸ್ ಕೃಷ್ಣ ಅವರ ಪರಿಚಯ ಚೆನ್ನಾಗಿ ಮೂಡಿಬಂತು. ಇದೇ ರೀತಿ ಇನ್ನಷ್ಟು ಹಾಸ್ಯ ಕಲಾವಿದರ ಪರಿಚಯ ಮಾಡಬೇಕು ಎನ್ನುವುದು ನನ್ನ ಆಶಯ. ಅದರಲ್ಲೂ ಬೆಂಗಳೂರು ನಾಗೇಶ್ ಅವರನ್ನು ನಾಡಿಗೆ ಪರಿಚಯ ಮಾಡಲೇಬೇಕು ಎಂದು ಬಯಸುತ್ತೇನೆ. ಏಕೆಂದರೆ, ಅಂತಹವರ ಪರಿಚಯ ಚಂದನ ಬಿಟ್ಟರೆ ಬೇರೆ ಎಲ್ಲೂ ನಿರೀಕ್ಷೆ ಮಾಡುವುದು ಕಷ್ಟ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ವಿಚಿತ್ರ ಕಾಮಿಡಿ

ಉದಯ ಕಾಮಿಡಿ ವಾಹಿನಿಯಲ್ಲಿ ಹಾಸ್ಯವನ್ನು ಅಪಹಾಸ್ಯ ಮಾಡುತ್ತಿದ್ದಾರೆ. ಕೆಲ ನಿರೂಪಕರ ಹಾವಭಾವ ಎಲ್ಲ ಅಯ್ಯೋ ಪಾಪ ಎನ್ನುವಂತಿರುತ್ತದೆ. ಹಾಸ್ಯ ಪ್ರಸಂಗಗಳು ಸೂಕ್ತವಾಗುವುದಿಲ್ಲ. 'ಕಾಮಿಡಿ ಮಿಕ್ಸ್' ಇನ್ನೂ ವಿಚಿತ್ರ.

—ಸೋಮೇಶ್ವರ

## ಸಮೀಕ್ಷೆ ಎಂಬ ಏಜೆಂಟ್!

ಭಾರತದ ಇತಿಹಾಸದಲ್ಲಿಯೇ ಕಂಡೂ ಕೇಳರಿಯದ ಚುನಾವಣಾ ಪ್ರಚಾರವನ್ನು ಮಾಧ್ಯಮಗಳು ಮಾಡುತ್ತಿವೆ. ಕೆಲವೊಮ್ಮೆ ಒಂದು ಪಕ್ಷದ ಏಜೆಂಟ್ ಅನ್ನೋ ರೀತಿಯಲ್ಲಿ ವರ್ತಿಸುತ್ತಿವೆ. ಅದರಲ್ಲೂ ಕೆಲವು ವಾಹಿನಿಗಳು ಹಳ್ಳಿ ಹಳ್ಳಿಗೆ ಹೋಗಿ ನೀವು ಯಾವ ಪಕ್ಷಕ್ಕೆ ವೋಟು ಹಾಕುತ್ತೀರಿ? ಹಾಗಾದ್ರೆ ಈ ಪಕ್ಷ ಬೇಡವೇ? ಹೀಗೇ ಮುಜುಗರದ ಪ್ರಶ್ನೆಗಳನ್ನೂ ಮುಂದಿಡುತ್ತವೆ.

ಇಲ್ಲಿ ಯಾವ ಪಕ್ಷಕ್ಕೆ ಬಹುಮತ ಬರುತ್ತದೆ ಎಂಬ ಸಮೀಕ್ಷೆಯನ್ನೂ ಮುಂದಿಡುತ್ತಾರೆ. ಅವರು ನಿಜಕ್ಕೂ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಮಾಡುತ್ತಿದ್ದಾರೆ. ಹಾಗಾದರೆ ಚುನಾವಣಾ ಆಯೋಗ ಇದಕ್ಕೆಲ್ಲ ನಿಯಂತ್ರಣ ಹೇರಬೇಕು ಎಂದು ನಿರೀಕ್ಷಿಸುವುದು ಸಹಜ ಅಲ್ಲವೇ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ವಾರದ ಪತ್ರ

### ಲಕ್ಷ್ಮಣ ಏನಾದ?

'ವೈದೇಹಿ ಏನಾದಳು?' ಎಂಬುದು ದಶಾವತಾರ ಚಿತ್ರದ ಅತ್ಯಂತ ಜನಪ್ರಿಯ ಗೀತೆ. ಈಗ ಧಾರಾವಾಹಿಗಳಲ್ಲಿ ಪಾತ್ರಗಳಿಗೆ ಪುರಾಣ ಪ್ರಸಿದ್ಧ ಹೆಸರುಗಳನ್ನು ಇಡುವುದು ಟ್ರೆಂಡ್. ಝೀ ಕನ್ನಡದ ಸತ್ಯ ಧಾರಾವಾಹಿಯಲ್ಲಿ ಶ್ರೀರಾಮಚಂದ್ರರಾಯರು, ಸೀತಮ್ಮ, ಲಕ್ಷ್ಮಣ, ಊರ್ಮಿಳಾ ಇತ್ಯಾದಿ ಪಾತ್ರಗಳಿವೆ. ಏಕಪತ್ನಿ ವ್ರತಸ್ಥ ರಾಮಚಂದ್ರರಾಯರ ತಮ್ಮ ಲಕ್ಷ್ಮಣ ದಾರಿ ತಪ್ಪುತ್ತಾನೆ. ಎರಡನೇ ಸಂಬಂಧ ಬೆಳಕಿಗೆ ಬಂದಾಗ ರಂಪ ರಾಮಾಯಣ ಆಗಿ ಎರಡನೇ ಹೆಂಡತಿ ಪದ್ಮ ತನ್ನ ಮಗನೊಂದಿಗೆ ಹೈದರಾಬಾದಿಗೆ ಹೋಗಿ ಪ್ರತ್ಯೇಕವಾಗಿ ನೆಲೆಸುವ ತೀರ್ಮಾನ ತೆಗೆದುಕೊಳ್ಳುತ್ತಾಳೆ. 'ಅವಳಿಗೆ ಅಲ್ಲಿ ವ್ಯವಸ್ಥೆ ಮಾಡಿ ಬಾ' ಎಂಬ ಅಣ್ಣನ ಆಣತಿಗೆ ತಲೆಬಾಗಿ ಹೋದ ಲಕ್ಷ್ಮಣ ಹಿಂದಕ್ಕೆ ಬರುವುದೇ ಇಲ್ಲ. ವಿಶೇಷವೆಂದರೆ ಮನೆಯಲ್ಲಿ ಯಾರೂ ಆ ಬಗ್ಗೆ ತುಟಿ ಪಿಟಿಕ್ ಎನ್ನುವುದಿಲ್ಲ. ಈಗ ನೋಡುಗರು 'ಲಕ್ಷ್ಮಣ ಏನಾದನು?' ಎಂದು ಹಾಡುವಂತಾಗಿದೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಉಲ್ಲಾಸ ತುಂಬಿದ 'ಸಂಧ್ಯಾರಾಗ'

ಕಲರ್ಸ್ ಕನ್ನಡ ಸಿನಿಮಾ ಚಾನಲ್‌ನಲ್ಲಿ ರಾಜ್ ಅಭಿನಯದ 'ಸಂಧ್ಯಾರಾಗ' ಸಿನಿಮಾ ಪ್ರಸಾರವಾಯಿತು. ಈ ಚಿತ್ರದ 'ನಂಬಿದೆ ನಿನ್ನ ನಾದ ದೇವತೆಯೇ' ಎಂಬ ಹಾಡು ಎಸ್. ಜಾನಕಿ, ಬಾಲಮುರಳಿಕೃಷ್ಣ, ಪಂಡಿತ್ ಭೀಮಸೇನ ಜೋಷಿ ಅವರ ಕಂಠ ಸುಧೆಯಲ್ಲಿ ಮೂಡಿಬಂದಿದೆ. ಅದನ್ನು ಕೇಳಿದಾಗ ನಿಜಕ್ಕೂ ಮೈ ರೋಮಾಂಚನವಾಯಿತು. 'ದೀನ ನಾ ಬಂದಿರುವೆ ಬಾಗಿಲಲ್ಲಿ ನಿಂದಿರುವೆ' ಗೀತೆಯಲ್ಲಿ ಪಿ.ಬಿ. ಶ್ರೀನಿವಾಸ್ ಅವರ ಕಂಠ ಸಿರಿ ಅದ್ಭುತ. ಒಟ್ಟಿನಲ್ಲಿ ಸಂಗೀತಮಯ 'ಸಂಧ್ಯಾ ರಾಗ' ವೀಕ್ಷಣೆ ಮನಸ್ಸಿಗೆ ಉಲ್ಲಾಸ ನೀಡಿದ್ದಂತೂ ಸತ್ಯ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## 'ಡ್ರಾಮಾ' ಮುಗಿಯಬಾರದಿತ್ತು

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ಮುಗಿದಿದ್ದು ಬೇಸರವನ್ನು ಮೂಡಿಸಿದೆ. ಪುಟ್ಟ ಮಕ್ಕಳು ಸತತ ಅಭ್ಯಾಸದಿಂದ ಒಳ್ಳೆಯ ಕಾರ್ಯಕ್ರಮವನ್ನು ನೀಡುತ್ತಿದ್ದರು. 'ಸರಿಗಮಪ' ಲಿಟ್ಲ್ ಚಾಂಪ್ ಕೂಡ ಅಷ್ಟೇ ವೀಕ್ಷಕರಿಗೆ ಸಂತೋಷವನ್ನು ನೀಡಿದೆ.

ಮಕ್ಕಳ ಸಂಗೀತ ಕಾರ್ಯಕ್ರಮವನ್ನು ಮತ್ತೆ ಆರಂಭಿಸಲಿ. ಈಗ 'ಮಹಾನಟಿ' ರಿಯಾಲಿಟಿ ಶೋ ಆರಂಭವಾಗಿದೆ. ಇದೂ ಬಹಳ ಹಿಡಿಸಿದೆ. ಯಾವುದೇ ಪಾತ್ರವನ್ನು ತಕ್ಷಣವೇ ನಟಿಸುವುದು ಸುಲಭದ ಕೆಲಸವಲ್ಲ. ಈ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿರುವ ಕಲಾವಿದರು ಅಂತಹ ಮಾತನ್ನು ಸುಳ್ಳಾಗಿಸುತ್ತಾರೆ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

## ಕುತೂಹಲದ 'ದೃಷ್ಟಿ'

ಸ್ಟಾರ್ ಸುವರ್ಣದ 'ದೃಷ್ಟಿ' ಧಾರಾವಾಹಿಯಲ್ಲಿ ಅಂಶ್ ಮತ್ತು ಮುನ್ನ, ಮೋಹನಾಳನ್ನು ಮುಗಿಸಿದರು. ಎಲ್ಲಾ ಸುಖಾಂತ್ಯವಾಯ್ತು ಎಂದುಕೊಳ್ಳುತ್ತಿರುವಾಗಲೇ ಮೋಹಿನಿ ರೂಬಿ ಮತ್ತೊಂದು ರೂಪದಲ್ಲಿ ರಾಥೋಡ್ ಕುಟುಂಬಕ್ಕೆ ಶಾಕ್ ಕೊಟ್ಟಿದ್ದಾಳೆ. ಒಟ್ಟಾರೆ 'ದೃಷ್ಟಿ' ತುಂಬಾ ಕುತೂಹಲದಿಂದ ಮುಂದುವರಿಯುತ್ತಿದೆ. ಪ್ರತಿ ಸಂಚಿಕೆಯನ್ನು ಬಿಟ್ಟೂ ಬಿಡದಂತೆ ನೋಡುವಂತೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿದೆ.

—ಅನುಪಮಾ, ತೀರ್ಥಹಳ್ಳಿ

## ಕಾರ್ಮಿಕ ದಿನದ ವಿಶೇಷ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಕಾರ್ಮಿಕ ದಿನದ ವಿಶೇಷ ಚೆನ್ನಾಗಿ ಬಂತು. ಶ್ರಮಜೀವಿಗಳ ಸಮ್ಮಿಲನ ಕಂಡು ಖುಷಿಯಾಯಿತು. ಈ ಕಾರ್ಯಕ್ರಮದಲ್ಲಿ ಅಡುಗೆಯವರು, ಬಸ್ ಕಂಡಕ್ಟರ್, ಮನೆಗೆಲಸದವರು ಸೇರಿದಂತೆ ಪೌರಕಾರ್ಮಿಕರೂ ಇದ್ದರು. ಇವರ ಜೊತೆ ಸಿಹಿ ಕಹಿ ಚಂದ್ರು ನಡೆಸಿದ ಮಾತುಕತೆ ಶ್ಲಾಘನೀಯ. ಆಹ್ವಾನಿತರೆಲ್ಲ ಹೊರರಾಜ್ಯದವರೇ ಆಗಿದ್ದರು. ಕನ್ನಡದ ಕಾರ್ಮಿಕರಿಗೂ ಈ ಗೌರವ ಸಲ್ಲಬೇಕು ಎಂದು ಅನ್ನಿಸುತ್ತದೆ.

—ಉಷಾ ಶ್ರೀಪಾದ, ಬೆಂಗಳೂರು